Alleged Animal Sacrifies without valid licence.

Q.—237. **Sri T. HANUMIAH** (Chitaldrug District—General).—

Will the Government be pleased to state :—

(*a*) the Departments to which the enforcement measures relating to Prevention of Cow Slaughter Act, Prevention of Animal Sacrifices Act, Temple Entry Act and the Civil Disabilities Removal Act are entrusted for operation ;

(*b*) whether it has come to their notice that even to-day, despite the prohibition of animal sacrifices in the presence of Gods and Goddesses during Jathras, some people are resorting to such sacrifies without a valid license ?

A.—**The Hon'ble Sri H. SIDDAIYA** (Minister for Revenue and Excise).—

(*a*) Revenue and Police Departments.

(*b*) No such cases have been reported from any of the districts.

ಶ್ರೀ ಟಿ. ಹನುಮಯ್ಯನವರು.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ರೆವಿನ್ಯೂ ಮತ್ತು ಪೋಲೀಸ್ ಇಲಾಖೆಗಳೆಂದು ತಿಳಿಸಿದ್ದೀರಿ. ಆದರೆ ಅವುಗಳು ಅರೀತಿ ಈ ಕಾನೂನನ್ನು ಜಾರಿಯಲ್ಲಿ ತರುತ್ತಿವೆಯೆಂದು ತಾವು ಭಾವಿಸಿದ್ದೀರಾ?

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಟಿ. ಹನುಮಯ್ಯನವರು.—ಈ ಪ್ರಾಣಿವಧೆ ಮತ್ತು ಗೋವಧೆ ಆಕ್ಟ್ ನರಿಯಾಗಿ ನಡೆಯುತ್ತಿದೆಯೆಂಬುದಾಗಿ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಚೆನ್ನಾಗಿ ನಡೆದುಕೊಂಡು ಬರುತ್ತಿದೆಯೆಂದು ಸರ್ಕಾರದವರು ತಿಳಿದಿದ್ದಾರೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಈ ಆಕ್ಟಿಗೆ ಯಾರೂ ವಿರೋಧವಾಗಿ ನಡೆದುಕೊಂಡಿರತಕ್ಕ ಅಂಶ ತಮ್ಮ ಅವಗಾಹನೆಗೆ ಬಂದಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಎಲ್ಲೂ ವಿರೋಧವಾಗಿ ನಡೆಯುತ್ತಿಲ್ಲವೆಂಬ ಭಗ್ಯೆ ತಾವು ರೆವಿನ್ಯೂ, ಪೋಲೀಸ್ ಇಲಾಖೆಗಳವರಿಂದ ವರದಿಗಳನ್ನು ತರಿಸಿಕೊಳ್ಳುತ್ತಾಗುತ್ತಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತರಿಸಿಕೊಳ್ಳರಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಹಳ್ಳಿಗಳಲ್ಲಿ ಈಗಲೂ ಜಾತ್ರೆಗಳು ನಡೆಯುತ್ತಿವೆಯೆಂಬ ಅಂಶ ತಮಗೆ ತಿಳಿದು ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಿಳಿದು ಬಂದಿದೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಜಾತ್ರೆ ನಡೆಯುವಾಗ ಕೋಣ, ಕುರಿಗಳು ವಧೆಯಾಗುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಮಾರಿ ಜಾತ್ರೆಯಲ್ಲಿ ಕೋಣ, ಕುರಿಗಳನ್ನು ವಧೆ ಮಾಡಲು ಅವರು ಕ್ರಮವಾದ ರಿಸೆಕ್ಷನ್ನು ಹೊಂದುತ್ತಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ರೈಸನ್ ಸು ಹೊಂದದೆ ವಧೆ ಮಾಡಿದರೆ ಅವರು ತಕ್ಷೀರಿಗೆ ಗುರಿಯಾಗುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಅಂಥ ವಧಿಗಳು ತಮಗೆ ಕಾಲಕಾಲಕ್ಕೆ ಸರಿಯಾಗಿ ಬರುತ್ತಿವೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬರುತ್ತಿವೆ. ಅವರಿಗೆ ಎಲ್ಲಾ ತಿಳಿವಳಿಕೆಗಳನ್ನೂ ಕೊಡಲಾಗಿದೆ. ಸರ್ಕ್ಯುಲರ್‌ಗಳನ್ನೆಲ್ಲ ಈ ಸಂಬಂಧವಾಗಿ ರೆವಿನ್ಯೂ ಮತ್ತು ಪೋಲೀಸ್ ಅಧಿಕಾರಿಗಳಿಗೆ ಕೂಡಲಾಗಿದೆ. ಅವರೆಲ್ಲಾ ಸರಿಯಾಗಿ ಕೆಲಸ ಮಾಡುತ್ತಿದ್ದಾರೆಂದು ನಮಗೆ ವರದಿಗಳು ಬರುತ್ತಿವೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಕುರಿ, ಕೋಣಗಳನ್ನು ಕಡಿಯದಂತೆ ನೋಡಿಕೊಳ್ಳಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳ ಏರಾ?

ಅಧ್ಯಕ್ಷರು.—ತಾವು ಕೇಳಿದ ಪ್ರಶ್ನೆಯನ್ನೇ ಪುನಃ ಕೇಳುವುದು ಸೂಕ್ತವಲ್ಲ.

ಶ್ರೀ ಎಸ್. ರಂಗರಾವಯ್ಯನವರು (ಮೈಸೂರು ಜಿಲ್ಲೆ).—ಕೋಣ, ಕುರಿ, ಕೋಳಿ ಇತ್ಯಾದಿಗಳನ್ನು ಅವರವರ ಮನೆಯಲ್ಲೇ ವಧೆಮಾಡಿ ತದನಂತರ, ಅದನ್ನು ದೇವಸ್ಥಾನಕ್ಕೆ ತಂದು ದೇವರಿಗೆ ನೈವೇದ್ಯ ಮಾಡಿದರೆ ಆಗ ಏನು ಮಾಡುತ್ತೀರಿ? ಅಂಥವರಿಗೆ ಏನು ಮಾಡುತ್ತೀರಿ ?

(ಉತ್ತರವಿಲ್ಲ.)

ಶ್ರೀ ಡಿ. ಗೋವಿಂದದಾಸರು (ಹಾಸನಜಿಲ್ಲೆ—ನಿಮ್ನ ಪಂಗಡ).— ತಾವು ಸಂಬಂಧಪಟ್ಟ ಇಲಾಖೆಗಳಿಂದ ವರದಿಯನ್ನು ತರಿಸಿಕೊಳ್ಳುವುದು ಎಷ್ಟೊಮ್ಮೆ ಅವಧಿ ಗೊಂದುಸಾರಿ ಕಳುಹಿಸುವಂತೆ ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಿಂದಾಗ್ಗೆ ಆ ವರದಿಗಳು ಬರುತ್ತಿರುತ್ತವೆ.

ಶ್ರೀ ಡಿ. ಗೋವಿಂದದಾಸರು.—ಅವರು ತಮಗೆ ಕಳುಹಿಸುತ್ತಿರುವ ವರದಿಗಳಿಂದ ಅಲ್ಲಿ ಈ ಕಾನೂನುಗಳನ್ನು ಸರಿಯಾಗಿ ಜಾರೀಲು ತರರಾಗುತ್ತಿದೆಯೆಂದು ತಮಗೆ ಗೊತ್ತಾಗುತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು. ಗೊತ್ತಾಗುತ್ತದೆ.

ಶ್ರೀ ಡಿ. ಗೋವಿಂದದಾಸರು.—ನಾನು ಹೇಳುತ್ತೇನೆ..... ...

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲದಲ್ಲಿ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಡಿ. ಗೋವಿಂದದಾಸರು.—ಹಾಗೆ ಕಾನೂನು ಸರಿಯಾಗಿ ಜಾರೀಲಲ್ಲವೆಂದು ತಿಳಿದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನಪಂಗಡ).—ತಾವು ಅಧಿಕಾರಿಗಳು ಈ ಕಾನೂನುಗಳನ್ನು ಕ್ರಮವಾಗಿ ಜಾರಿಗೆ ತರಲು ತಕ್ಕ ಎಲ್ಲಾ ಏರ್ಪಾಡುಗಳನ್ನು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾಡರಾಗಿದೆ.

ಶ್ರೀ ಎಂ. ಮಾದಯ್ಯನವರು.—ಹಾಗೆ ಏನು ಏರ್ಪಾಡುಗಳನ್ನು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇರಾಖಾ ಪೊತ್ತೀನಮಗಳು ಅವರಿಗೆರ್ಲಾ ನರಿಯಾಥ ತಿಳುವಳಿಕೆ ಕೊಟ್ಟು ಅಬಗ್ಯೆ ಅವರಿಗೆ ಒದಗಿಸಬೇಕಾದ ಆ ರ್ಥರು ಇತ್ಯಾದಿಗಳನ್ನೆರ್ಲಾ ಒದಗಿಸಿ ಅನುಕೂಲಮಾಡಿಕೊಡುತ್ತಾರೆ.

ಶ್ರೀ ಎಂ. ಮಾನಯ್ಯನವರು.—ತಾಲ್ಲೂಕಾಮಳೆ ಇರತಕ್ಕ ರೆವಿನ್ಯೂ ಅಧಿಕಾರಿಗಳು, ಬಹಳ ಪ್ರಾಮುಖ್ಯವಾದ ಮತ್ತು ರಾಜಪ್ರಮುಖರಿಂದ ಅಕೌಂಟ್ ಪಡೆದು ಕಾನೂನಾದ ಅನೇಕ ವಿಚಾರಗಳು ತಮಗೆ ಏನೂ ಗೊತ್ತಿಲ್ಲವೆಂದು ಹೇಳುತ್ತಿದ್ದಾರಲ್ಲಾ !

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥ ನಿದರ್ಶನಗಳಿದ್ದು, ತಮಗೆ ಯಾರಾದರೂ ಹಾಗೆ ತಿಳಿಸಿದ್ದಲ್ಲ ನನಗೆ ಗೋಪ್ಯವಾಗಿ ತಿಳಿಸಿ. ಅದನ್ನು ವಿಚಾರಿಸಿ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಂ. ಮಾದಯ್ಯನವರು.—ಕಾಗನೈಜಬರ್ ಅಕ್ಕಿನ್ನುಗಳನ್ನು ಮಾಡುತ್ತಿದ್ದರೂ ಅದನ್ನು ಗಮನಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

Tasdik Grants to Nanjangud and other Temples.

Q.—266. Sri S. RANGARAMIAH (Mysore District—General).—Will the Government be pleased to state :—

(*a*) the amount of *tasdik* spent for the *pujas* and *deeparadhanas*, etc., annually in the temples of Nanjangud, Chamarajanagar, Melkote and Belur ;

(*b*) the amount spent for the years 1940, 1945, 1950 for the *tasdik* in those temples ;

(*c*) whether they are aware that the quantity of the foodstuffs and other goods supplied for the *pujas*, etc., has been reduced owing to the rise in prices ; whether there are any representations made to them by the temple authorities to increase the grant ; if so, the action taken by the Government ?

A.—The Hon'ble Sri H. SIDDAIYA (Minister for Revenue and Excise).—

(*a*) The amount of *tasdik* spent for *pujas* and *deeparadhane*, etc, in the temples at :

(1) *Nanjangud*	(2) *Chamarajanagar*	(3) *Melkote*	(4) *Belur*
Rs. 20,139-11-0	No cash grant, except income from inam lands which is Rs. 28,831-9-0 per annum.	According to the scale fixed in 1900 Rs. 20,295.	Rs. 2,456-13-0

(*b*) The amount spent for *tasdik* in :—

1940 ...	Rs. 20,139-11-0 ...	According to the scale fixed in 1900 Rs. 20,295.	Rs. 2,456-13-0
1945 ...	Do ...	Do	do
1950 ...	Do ...	Do	do

(*c*) Sometimes, quantities of food and puja materials are reduced owing to the rise in prices. No representations in general have been received for the ncrease of grants.

ಶ್ರೀ ಎಸ್. ರಂಗರಾಮಯ್ಯನವರು.—ನಂಜನಗೂಡು, ಚಾಮರಾಜನಗರ, ಮೇಲುಕೋಟೆ ಮತ್ತು ಬೇಲೂರು ದೇವಸ್ಥಾನಗಳಲ್ಲಿ ಕೊಡುತ್ತಿರುವ ತಸ್ದೀಕು ಪೊಬಲಗನ್ನು ಹೇಳಿದೆ. ಅದನ್ನು 1940ನೆಯ ಇಸವಿಯಿಂದ ಇದುವರೆಗೆ-ಒಂದೇ ರೀತಿಯಾಗಿ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ 1940 ರಿಂದ ಇದುವರೆಗೆ ಬೆಲೆ ಒಂದಕ್ಕೆ ನಾಲ್ಕರಷ್ಟು ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಅಲೋಚನೆಮಾಡಲಾಗುತ್ತಿದೆ. ನಂಜನಗೂಡು ದೇವಸ್ಥಾನಕ್ಕೆ ಕೊಡುವುದನ್ನು ಈಚೆಗೆ ಬದಲಾವಣೆ ಮಾಡಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ನಂಜನಗೂಡು ದೇವಸ್ಥಾನಕ್ಕೆ ಪೂಜೆ ಮತ್ತು ಇತರ ಕೈಂಕರ್ಯಗಳಿಗಾಗಿ ಕೊಡುತ್ತಿರುವ 20,139-11-0 ಧಾನ್ಯರೂಪವಾಗಿ ನಲ್ಲುತ್ತಿದೆಯೋ ಅಥವಾ ನಗದಾಗಿ ಕೊಡುತ್ತಿದ್ದೀರೊ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಉತ್ತರ ಪ್ರಶ್ನೆಯ ಕೆಳಗೇ ಕೊಟ್ಟಿದೆ.

ಶ್ರೀ ಎಸ್. ರಂಗರಾವ ಯ್ಯನವರು.—ಈಗ ಧಾನ್ಯ ರೂಪವಾಗಿ ಅಲ್ಲ ಕೊಡುತ್ತಿರುವ ಲವಾಜಮೆ ಸೇರು ಗಚ್ಚಲೆ ತಾನೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು

ಶ್ರೀ ಎಸ್. ರಂಗರಾಮಯ್ಯನವರು.—ಈಗ. ಕೊಡುತ್ತಿರುವ ಧಾನ್ಯದ ಪ್ರಕಾರ ರೆಕ್ಕಹಾಕಿದರೆ ಕೊಡುವ ಪೊಬಲಗು ಬಹಳ ಕಡಮೆಯಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ರೆಕ್ಕ ಹಾಕಿದರೆ ತಮಗೇ ಅರ್ಥವಾಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ನಂಜನಗೂಡಿಗೆ ಕೊಡುವುದನ್ನು ಹೆಚ್ಚಿಸಿದೆಯೆ ?